# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ದಿನಾಂಕ: 07.11.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 186 ಜರಗನಹಳ್ಳಿ, ವಾರ್ಡ್ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ.

ಹಾಜರಿದ್ದವರು.

| | |
|---|---|
| ಡಾ॥ ರವಿ. ನೋಡಲ್ ಅಧಿಕಾರಿಗಳು | ಜರಗನಹಳ್ಳಿ 186ರ ವಾರ್ಡ್ ಸಮಿತಿ ಅಧ್ಯಕ್ಷರು. ಬಿಬಿಎಂಪಿ. |
| ಕೆ.ಆರ್ ನಾಗರಾಜ್. | ಸಹಾಯಕ ಅಭಿಯಂತರರು, ವಾರ್ಡ್ ನಂ 186. ಬಿಬಿಎಂಪಿ. |
| ಶ್ರೀ ಶಿವು ಮತ್ತು ಸಹಾಯಕ. | ಬೀದಿ ದೀಪ ನಿರ್ವಹಣೆ ಗುತ್ತಿಗೆದಾರ ಸಿಬ್ಬಂದಿ. |
| ಶ್ರೀ ಕೃಷ್ಣ | ಕಿರಿಯ ಆರೋಗ್ಯ ಪರಿವೀಕ್ಷಕರು. ಬಿಬಿಎಂಪಿ. |
| ಶ್ರೀ ಕೃಷ್ಣಯ್ಯ | ಸಹಾಯಕ ಅಭಿಯಂತರರು. ಬೆಸ್ಕಾಂ |
| ಶ್ರೀ ಗುರು ಪ್ರಸಾದ್. | ಕಿರಿಯ ಅಭಿಯಂತರರು, ಬೆಸ್ಕಾಂ |
| ಶ್ರೀ ವಿನಯ್. | ಸಹಾಯಕ ಅಭಿಯಂತರರು, ನೀರು ಸರಬರಾಜು & ಒಳಚರಂಡಿ ಮಂಡಳಿ. |
| ಶ್ರೀ ಅಂಜನಪ್ಪ, ಶ್ರೀ.ಅರ್ಜುನ್‌ಗೌಡ, ಶ್ರೀ ಶಶಿ, ಮತ್ತು ಶ್ರೀ ರಾಜಪ್ಪ. | ವಾಲ್ ಮ್ಯಾನ್‌ಗಳು, ನೀರು ಸರಬರಾಜು & ಒಳಚರಂಡಿ ಮಂಡಳಿ. |
| ಶ್ರೀ ಹೋಬಳೇಶ್ ಮತ್ತು ಲೋಕೇಶ್. | ಸ್ವಚ್ಛತಾ ಮೇಲ್ವಿಚಾರಕರು. ಬಿಬಿಎಂಪಿ. |
| ಶ್ರೀ ಮೊಹಮ್ಮದ್ ಅಬ್ದುಲ್ ಅಲಿಂ. | ಹೆಚ್.ಎಂ ತಂಬೂರಿಯನ್ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್. |
| ವಾರ್ಡ್ ನಂ 186ರ ನಾಗರೀಕರು ಮತ್ತು ಹಿರಿಯ ನಾಗರೀಕರು. | 8 – 10 ಮಂದಿ. |

ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ಕಾರ್ಯದರ್ಶಿ ಹಾಗೂ ಸಂಚಾಲಕರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

| | |
|---|---|
| ವಿಷಯ–38 | ಹಿಂದಿನ ಸಭೆಯ ನಡವಳಿಯನ್ನು ಓದಿ ರೆಕಾರ್ಡ್ ಮಾಡುವುದು. |
| ತೀರ್ಮಾನ–38 | ಹಿಂದಿನ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ವಿಷಯ ಮತ್ತು ತೀರ್ಮಾನವನ್ನು ಓದಿ ರೆಕಾರ್ಡ್ ಮಾಡಲಾಯಿತು. |
| ವಿಷಯ –39 | ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಚರ್ಚಿಸುವುದು. |

| | |
|---|---|
| ತೀರ್ಮಾನ :-39 | ವಾರ್ಡ್ ನಂ 186 ಜರಗನಹಳ್ಳಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯು ಸಮಾಧಾನಕರವಾಗಿರುತ್ತದೆ ಹಾಗೂ ಕಸ ವಿಲೇವಾರಿ ಸಮರ್ಪಕವಾಗಿ ನಿರ್ವಹಿಸಲು ಪೌರಕಾರ್ಮಿಕರುಗಳನ್ನು ಹೆಚ್ಚಿಸುವುದು ಅಗತ್ಯವಾಗಿರುತ್ತದೆ ಮತ್ತು ಜನರಲ್ಲಿ ಕಸ ವಿಂಗಡಣೆಯ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಗಾರವನ್ನು ಹಮ್ಮಿಕೊಳ್ಳಬೇಕೆಂದು ಶ್ರೀ ಕೃಷ್ಣ, ಕಿರಿಯ ಆರೋಗ್ಯ ಪರಿವೀಕ್ಷಕರು ತಮ್ಮ ಅಭಿಪ್ರಾಯವನ್ನು ಸಭೆಗೆ ತಿಳಿಸಿರುತ್ತಾರೆ. |
| ವಿಷಯ-40 | ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ಚರ್ಚಿಸುವುದು. |
| ತೀರ್ಮಾನ :-40 | ವಾರ್ಡ್ ನಂ 186 ಜರಗನಹಳ್ಳಿ ವ್ಯಾಪ್ತಿಯಲ್ಲಿ ಮೊಹಮ್ಮದ್ ಅಬ್ದುಲ್ ಅಲೀಂ ರವರು ಮಾತನಾಡುತ್ತಾ ಕನಕಪುರ ಮುಖ್ಯ ರಸ್ತೆಯಲ್ಲಿ ಕೆಲವು ಬೀದಿ ದೀಪಗಳ ಅಟೋಮ್ಯಾಟಿಕ್ ಟೈಮ್‌ರ್‌ಅನ್ನು ದುರಸ್ಥಿಪಡಿಸಬೇಕೆಂದು ತಿಳಿಸಿರುತ್ತಾರೆ. ಅದರಂತೆ ಬೀದಿ ದೀಪಗಳ ನಿರ್ವಹಣೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ನಿರ್ವಹಿಸುತ್ತಿದ್ದು, ನಿರ್ವಹಣೆ ಕಾಮಗಾರಿಯು ಸಮಾಧನಕರವಾಗಿದೆಯೆಂದು ಹಾಗೂ ಈ ಕೂಡಲೇ ಅಟೋಮ್ಯಾಟಿಕ್ ಟೈಮ್‌ರ್‌ಅನ್ನು ದುರಸ್ಥಿಪಡಿಸಲಾಗುವುದು ಎಂದು ಬೀದಿ ದೀಪ ನಿರ್ವಹಣಾ ಸಿಬ್ಬಂದಿ ತಿಳಿಸಿರುತ್ತಾರೆ. |
| ವಿಷಯ-41 | ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ನಿರ್ವಹಣೆಯ ಬಗ್ಗೆ ಚರ್ಚಿಸುವುದು. |
| ತೀರ್ಮಾನ :-41 | ವಾರ್ಡ್ ನಂ 186ರ ವ್ಯಾಪ್ತಿಯ ಪೆರಿಯಣ್ಣ ಬಡಾವಣೆಯಲ್ಲಿ ಕುಡಿಯುವ ನೀರು ಮಲೀನಗೊಂಡಿದ್ದು ಹಿಂದಿನ ಸಭೆಯಲ್ಲಿಯೂ ಸಹ ಚರ್ಚಿಸಲಾಗಿದ್ದು ಆದರೂ ಕೂಡಾ ಈವರೆವಿಗೂ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿರುವುದಿಲ್ಲವೆಂದು ಸಾರ್ವಜನಿಕರು ಅಸಮಧಾನ ವ್ಯಕ್ತಪಡಿಸಿರುತ್ತಾರೆ ಹಾಗೂ ಸಾರ್ವಜನಿಕರು ಮಾತನಾಡುತ್ತಾ ವಾಟರ್ ಮ್ಯಾನ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ & ಬೇಜಾವಬ್ದಾರಿತನದಿಂದ ವರ್ತಿಸುತ್ತಿರುವುದಾಗಿ ದೂರಿರುತ್ತಾರೆ.<br><br>ಸಹಾಯಕ ಅಭಿಯಂತರರು, ಬಿಬಿಎಂಪಿ ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಡಾಂಬರೀಕರಣ ಮಾಡುವ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿದ್ದು ಕಾರ್ಯದೇಶ ನೀಡುವ ಮುನ್ನ ಅಂದರೆ 15ರಿಂದ 20 ದಿನಗಳ ಒಳಗಾಗಿ ಕುಡಿಯುವ ನೀರಿನ ಪೈಪ್ ಲೈನ್ ದುರಸ್ಥಿಪಡಿಸುವುದು/ಬದಲಿಸುವುದು, ಒಳಚರಂಡಿ ಕೊಳವೆಗಳನ್ನು ದುರಸ್ಥಿಪಡಿಸುವುದು/ಬದಾಲಾಯಿಸುವುದು, ಮ್ಯಾನ್‌ಹೋಲ್‌ಗಳನ್ನು ದುರಸ್ಥಿ/ನಿರ್ಮಾಣ ಮಾಡುವ ಕಾಮಗಾರಿಗಳನ್ನುಡಾಂಬರೀಕರಣ ಮಾಡುವ ಮುನ್ನ ಮುಗಿಸಿಕೊಳ್ಳಬೇಕೆಂದು ಸಹಾಯಕ ಅಭಿಯಂತರರು. ಬಿಡ್ಲ್ಯೂಎಸ್‌ಎಸ್‌ಬಿ ರವರಲ್ಲಿ ಕೋರಿರುತ್ತಾರೆ. ಹಾಗೂ ವಾಲ್ ಮ್ಯಾನ್‌ಗಳಿಗೆ ಜವಬ್ದಾರಿಯುತವಾಗಿ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಲು ಮಾನ್ಯ ಸಮಿತಿ ಅಧ್ಯಕ್ಷರು ಸೂಚಿಸಿದರು. |
| ವಿಷಯ-42 | ವಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸುವುದು. |

| | |
|---|---|
| ತೀರ್ಮಾನ :-42 | ವಾರ್ಡ್ ನಂ 186ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ನವನಗರೋತ್ಥಾನ ಅನುದಾನದಡಿಯಲ್ಲಿ ವಿಶ್ವಮೂರ್ತಚಾರ್ ಪಾರ್ಕ್‌ನಲ್ಲಿ ಶೌಚಾಲಯ, ಯೋಗಾ ಹಾಲ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>14ನೇ ಹಣಕಾಸು ಅನುದಾನದಡಿಯಲ್ಲಿ ಗುಂಡಮ್ಮ ಬಡಾವಣೆಯ ರಸ್ತೆಯಲ್ಲಿ ಆರ್.ಸಿ.ಸಿ ಚರಂಡಿ ಕಾಮಗಾರಿ, ಕೆ.ಆರ್ ಬಡಾವಣೆಯಲ್ಲಿ ಒಳಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.<br><br>ವಿಶೇಷ ಅಭಿವೃದ್ಧಿ ಕಾಮಗಾರಿಗಳ ಅನುದಾನದಡಿಯಲ್ಲಿ ಜ್ಯೋತಿ ಬಡಾವಣೆ, ಎಂ.ಎಸ್ ಬಡಾವಣೆ ಮತ್ತು ಶ್ರೀನಿವಾಸ ಕಲ್ಯಾಣ ಮಂಟಪ ರಸ್ತೆಗಳಲ್ಲಿ ಕರ್ಬ್ ಸ್ಟೋನ್ ಮತ್ತು ಕವರಿಂಗ್ ಸ್ಲ್ಯಾಬ್ ಅಳವಡಿಸುವುದು ಹಾಗೂ ಕಲ್ವರ್ಟ್‌ಗಳ ನಿರ್ಮಾಣ, ಚರಂಡಿಗಳಲ್ಲಿ ತುಂಬಿರುವ ಹೂಳನ್ನು ಹೊರತೆಗೆದು ಸಾಗಿಸುದು ಮತ್ತು ಇತರೆ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಸಹಾಯಕ ಅಭಿಯಂತರರು. ಸಭೆಗೆ ತಿಳಿಸಿದರು. |
| ವಿಷಯ-43 | ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ಎ.ಬಿ.ಸಿ ಕೇಬಲ್ ಅಳವಡಿಸುತ್ತಿರುವ ಬಗ್ಗೆ ಚರ್ಚಿಸುವುದು. |
| ತೀರ್ಮಾನ :-43 | ಎ.ಬಿ.ಸಿ ಕೇಬಲ್ ಹಾಗೂ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸುವ ಕಾಮಗಾರಿಯು ನಿಧಾನಗತಿಯಲ್ಲಿ ನಡೆಯುತ್ತಿದ್ದು ಇದರಿಂದ ಸಾರ್ವಜನಿಕರು & ವಾಹನ ಸವಾರರಿಗೆ ಓಡಾಡಲು ತೊಂದರೆಯಾಗುತ್ತಿರುವುದಾಗಿ ಸಾರ್ವಜನಿಕರು ತಿಳಿಸಿರುತ್ತಾರೆ.<br><br>ಶ್ರೀ ಕೃಷ್ಣಯ್ಯ ಸಹಾಯಕ ಅಭಿಯಂತರರು ಬೆಸ್ಕಾಂರವರು ಮಾತನಾಡುತ್ತಾ ಸದರಿ ಕಾಮಗಾರಿಯು 25-30 ದಿನಗಳ ಒಳಗೆ ಮುಕ್ತಾಯಗೊಳ್ಳಲು ಶ್ರಮಿಸುವುದಾಗಿ ಸಭೆಗೆ ತಿಳಿಸಿದರು ಹಾಗೂ ಸಾರಕ್ಕಿ ತೋಟ 3ನೇ ಅಡ್ಡರಸ್ತೆ ಮತ್ತು ಜರಗನಹಳ್ಳಿ ಪಾರ್ಕ್ ಪಶ್ಚಿಮ ದಿಕ್ಕಿನ ರಸ್ತೆಯಲ್ಲಿ ಶಿಥಿಲಗೊಂಡಿರುವ ಬೀದಿ ದೀಪದ ಕಂಬಗಳನ್ನು ಬದಲಾಯಿಸುವುದಾಗಿ ತಿಳಿಸಿದರು.<br><br>ಸಹಾಯಕ ಅಭಿಯಂತರರು, ಬಿಬಿಎಂಪಿ ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಡಾಂಬರೀಕರಣ ಮಾಡುವ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿದ್ದು ಕಾರ್ಯದೇಶ ನೀಡುವ ಮುನ್ನ ಅಂದರೆ 15ರಿಂದ 20 ದಿನಗಳ ಒಳಗಾಗಿ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸಲು ರಸ್ತೆಗಳನ್ನು ಅಗೆಯುವ ಕಾಮಗಾರಿಗಳನ್ನು ಡಾಂಬರೀಕರಣ ಮಾಡುವ ಮುನ್ನ ಮುಗಿಸಿಕೊಳ್ಳಬೇಕೆಂದು ಸಹಾಯಕ ಅಭಿಯಂತರರು. ಬೆಸ್ಕಾಂ ರವರಲ್ಲಿ ಕೋರಿರುತ್ತಾರೆ. |
| ವಿಷಯ-44 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಬಗ್ಗೆ ಚರ್ಚಿಸುವ ಬಗ್ಗೆ. |
| ತೀರ್ಮಾನ :-44 | ಶ್ರೀ ನಾಗೇಂದ್ರ, ಆರೋಗ್ಯ ವೈದ್ಯಾಧಿಕಾರಿಗಳು. ಬೊಮ್ಮನಹಳ್ಳಿ ವಲಯ ರವರು ವಾರ್ಡ್‌ನ ಕೋವಿಡ್-19ರ ಅಂಕಿ ಅಂಶಗಳನ್ನು, ಸೊಂಕಿತ ವ್ಯಕ್ತಿ, ಪ್ರಥಮ ಸಂಪರ್ಕಿತರು, ದ್ವಿತೀಯ ಸಂಪರ್ಕಿತರ ಬಗ್ಗೆ ವಿವರವಾಗಿ ಸಭೆಗೆ ತಿಳಿಸಿದರು ಹಾಗೂ ಸುಮಾರು 15 ರಿಂದ 20 ಸಂಖ್ಯೆ ಸ್ವಯಂ ಸೇವಕರು ಅವಶ್ಯಕತೆ ಇದ್ದು, ಸರ್ಕಾರವು ಸ್ವಯಂ ಸೇವಕರಿಗೆ ಮಾಹೆಯಾನ 10,000/- ರೂಗಳ ಗೌರವಧನದ ರೂಪದಲ್ಲಿ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು. |
| ವಿಷಯ-45 | ವಾರ್ಡ್ ವ್ಯಾಪ್ತಿಗೆ ಒಳಪಡುವ ಸಾರಕ್ಕಿ/ಜರಗನಹಳ್ಳಿ/ಮುಟ್ಟೇನಹಳ್ಳಿ ಕೆರೆಯ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಚರ್ಚಿಸುವುದು. |

| | |
|---|---|
| ತೀರ್ಮಾನ :-45 | ಕೆರೆಯ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಚರ್ಚಿಸಲು ಸಂಬಂಧಿಸಿದ ಅಧಿಕಾರಿ ಅಥವಾ ಸಿಬ್ಬಂದಿ ಹಾಜರಿಲ್ಲದಿರುವ ಕಾರಣ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| ವಿಷಯ-46 | ವಾರ್ಡ್ ವ್ಯಾಪ್ತಿಗೆ ಒಳಪಡುವ ಬೃಹತ್ ನೀರುಗಾಲುವೆ ಕಾಮಗಾರಿಯ ಬಗ್ಗೆ ಚರ್ಚಿಸುವುದು. |
| ತೀರ್ಮಾನ :-46 | ಬೃಹತ್ ನೀರುಗಾಲುವೆ ಕಾಮಗಾರಿಯ ಬಗ್ಗೆ ಚರ್ಚಿಸಲು ಸಂಬಂಧಿಸಿದ ಅಧಿಕಾರಿ ಅಥವಾ ಸಿಬ್ಬಂದಿ ಹಾಜರಿಲ್ಲದಿರುವ ಕಾರಣ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

**ವಾರ್ಡ್‌ನ ಅಧ್ಯಕ್ಷರು ವಂದನಾರ್ಪಣೆ ಮಾಡುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

( ಡಾ॥ ರವಿ).
ನೋಡಲ್ ಅಧಿಕಾರಿಗಳು
ವಾರ್ಡ್ ನಂ 186.